ದಿಃ 18.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ., ವಕೀಲರಿಂದ ವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವೀಲು ನಾಮೆಯನ್ನು ಮತ್ತು ಅದರಲ್ಲಿ ಇರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ನನಗೆ ತೋರಿಸಿದ ದಾಖಲೆಯು ಜಯಮ್ಮ ರವರ ಮರಣ ಪತ್ರ ಆಗಿರುತ್ತದೆ. ಸದರಿ ವೀಲು ನಾಮೆಯನ್ನು ಜಯಮ್ಮ ರವರು ತನ್ನ ಮಗಳ ಹೆಸರಿಗೆ ಬರೆದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನನಗೆ ಜಯಮ್ಮ ರವರು ತುಂಬಾ ಪರಿಚಯಸ್ಥರಾದ ಕಾರಣ ಸದರಿ ವೀಲು ನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ವೀಲು ನಾಮೆಯನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಿದ್ದು ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನಿ.ಪಿ.8 ಅನುಭಂದ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಿ.ಪಿ.7 ದಾಖಲೆಗೆ ನಾನು ಆದತ್ಯ ವಕೀಲರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಮೊದಲಿಗೆ ಜಯಮ್ಮರವರು ನಿ.ಪಿ.7 ದಾಖಲೆಗೆ ಸಹಿ ಮಾಡಿರುತ್ತಾರೆ ನಂತರ ನಾನು ನಿ.ಪಿ.7 ದಾಖಲೆಗೆ ಸಹಿ ಮಾಡಿರುತ್ತೇನೆ. ಜಯಮ್ಮ ರವರ ರುಜುವನ್ನು ನಾನು ಈ ದಿನ ನಿ.ಪಿ.7 ದಾಖಲೆಯಲ್ಲಿ ನೋಡಿ ಗುರುತಿಸಿರುತ್ತೇನೆ. ಜಯಮ್ಮ ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ನಿ.ಪಿ.8 ದಾಖಲೆಗೆ ನಾನು ಆದತ್ಯ ವಕೀಲರ

ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ.8 ದಾಖಲೆಗೆ ಜಯಮ್ಮರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.8(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎನ್.ಎಸ್.ಜೆ. ವಕೀಲರಿಂದ ಪ್ರತಿವಾದಿ ಪರವಾಗಿ**

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 06.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಪಾಟೀ ಸವಾಲು ಶ್ರೀ ಎನ್.ಎಸ್.ಜೆ. ವಕೀಲರಿಂದ ಪ್ರತಿವಾದಿ ಪರವಾಗಿ</u>**

4. ದಿಃ 03.12.2016 ರಂದು ಜಯಮ್ಮ ರವರು ವೀಲು ನಾಮೆಗೆ ಸಹಿ ಹಾಕುವಂತೆ ಹೇಳಿದ ಕಾರಣ ನಾನು ಕೆ.ಎಸ್. ಆದಿತ್ಯ ವಕೀಲರ ಕಚೇರಿಗೆ ಹೋಗಿರುತ್ತೇನೆ. ಯಾವ ದಿನಾಂಕದಂದು ಜಯಮ್ಮ ರವರು ಸಹಿ ಹಾಕಲು ಬರಲು ಹೇಳಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಆದರೆ ಡಿಸೆಂಬರ್ ತಿಂಗಳಿನಲ್ಲಿ ಹೇಳಿರುತ್ತಾರೆ. ನಾನು ಕೆ.ಎಸ್. ಆದಿತ್ಯ ವಕೀಲರ ಕಚೇರಿಯಲ್ಲಿ ಇರುವ ಸಮಯದಲ್ಲಿ ಜಯಮ್ಮ ರವರು ವೀಲು ನಾಮೆಗೆ ಸಹಿ ಹಾಕುವಂತೆ ನನಗೆ ಹೇಳಿರುತ್ತಾರೆ. ವೀಲು ನಾಮೆಗೆ ಸಹಿ ಹಾಕುವ 4 ದಿನಗಳ ಪೂರ್ವದಲ್ಲಿ ನನಗೆ ಜಯಮ್ಮ ರವರು ಮೂಡಿಗೆರೆ ಬಸ್ಸು ನಿಲ್ದಾಣದ ಬಳಿ ವೀಲು ನಾಮೆಗೆ ಸಹಿ ಹಾಕಲು ಬರುವಂತೆ ತಿಳಿಸಿರುತ್ತಾರೆ. ಸದರಿ ವೀಲು ನಾಮೆಯನ್ನು ಎಷ್ಟು ಮುಖ ಬೆಲೆಯ ಛಾಪಾ ಕಾಗದಲ್ಲಿ ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಛಾಪಾ ಕಾಗದವನ್ನು ಯಾರ ಹೆಸರಿಗೆ ಖರೀದಿ ಮಾಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಛಾಪಾ ಕಾಗದದ 2 ಪುಟಗಳಲ್ಲಿಯು ಬೆರಳಚ್ಚು ಮಾಡಲಾಗಿತ್ತು. ನಾನು ಸದರಿ ವೀಲು ನಾಮೆಯನ್ನು ಓದಿ ನೋಡಿರುವುದಿಲ್ಲ. ಡಿಸೆಂಬರ್ 3 ಅಥವಾ 4 ನೇ ತಾರೀಖಿನಂದು ನಾನು ವೀಲು ನಾಮೆಗೆ ಸಹಿ ಮಾಡಿರುತ್ತೇನೆ ನಂತರ ನಾನು ಡಿಸೆಂಬರ್ ಕೊನೆಯ ವಾರದಲ್ಲಿ ವೀಲು ನಾಮೆಯ ತಿದ್ದುಪಡಿ ಪತ್ರಕ್ಕೆ ಸಹಿ ಮಾಡಿರುತ್ತೇನೆ. ನಾನು ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಸಹಿ ಮಾಡಿರುವ ವೀಲು ನಾಮೆಯ ತಿದ್ದುಪಡಿ ಪತ್ರವು ಎಷ್ಟು ಮುಖ ಬೆಲೆಯ ಛಾಪಾ ಕಾಗದದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಹಾಕಲು ಹೋಗುವ ಸಮಯದಲ್ಲಿ ಸದರಿ ವೀಲು ನಾಮೆ ಮತ್ತು ವೀಲು ನಾಮೆಯ ತಿದ್ದುಪಡಿ ಪತ್ರವು ನೋಟರಿಯಾಗಿತ್ತು. ವೀಲು ನಾಮೆಗೆ ನಾನು ಸಹಿ ಹಾಕಲು ಹೋದ ಸಮಯದಲ್ಲಿ ಜಯಮ್ಮ ರವರ ಆರೋಗ್ಯ ಸ್ಥಿತಿ

ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸಹಿ ಮಾಡಿರುವ ಡಿಸೆಂಬರ್ 3-4 ನೇ ತಾರೀಖಿನಂದು ಸಹಿ ಮಾಡಿದ್ದೇನೆ ಎಂದು ಹೇಳಲಾದ ವೀಲು ನಾಮೆಯನ್ನು ಯಾರು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ 2 ಪತ್ರಗಳಲ್ಲಿ ನಾನು ಸಹಿ ಮಾಡವ ಸಮಯದಲ್ಲಿ ಜಯಮ್ಮ ರವರ ಸಹಿ ಇತ್ತು ಬೇರೆ ಯಾರ ಸಹಿ ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಗುರುವಪ್ಪ ರವರು ಹಾಜರಿದ್ದರು ಎಂದು ನುಡಿಯುತ್ತಾರೆ. ಸದರಿ ಗುರುವಪ್ಪ ಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ. ಗುರುವಪ್ಪ ರವರು ಅಣಜೂರಿನ ನಿವಾಸಿಯಾಗಿರುತ್ತಾರೆ. ವೀಲು ನಾಮೆಗೆ ನಾನು ಒಂದೇ ಸಹಿಯನ್ನು ಮಾಡಿರುತ್ತೇನೆ. ಸದರಿ ವೀಲು ನಾಮೆಯಲ್ಲಿ ಎಷ್ಟು ಆಸ್ತಿಗಳನ್ನು ನಮೂದು ಮಾಡಿತ್ತು ಎಂದು ನನಗೆ ಗೊತ್ತಿಲ್ಲ. ವೀಲು ನಾಮೆಯಲ್ಲಿ ನಮೂದು ಮಾಡಿರುವ ಆಸ್ತಿಗಳು ಮೂಡಿಗೆರೆಯ ಮೇಗಲಪೇಟೆಯ ಆಸ್ತಿಗಳು ಆಗಿರುತ್ತವೆ. ಸದರಿ ಆಸ್ತಿಗಳಿಗೆ ಸಂಬಂಧಪಟ್ಟ ದಾಖಲಾತಿಯನ್ನು ನಾನು ಸದರಿ ಸಂದರ್ಭದಲ್ಲಿ ಗಮನಿಸಿರುವುದಿಲ್ಲ. ಸದರಿ ವೀಲು ನಾಮೆಯು ಒಟ್ಟು ಎಷ್ಟು ಪುಟಗಳಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ನಾನು ಸಹಿ ಮಾಡಿರುವ ವೀಲು ನಾಮೆಯು ಎಲ್ಲಾ ಪುಟಗಳು ಛಾಪಾ ಕಾಗದದಲ್ಲಿಯೇ ಇತ್ತು. ನಾನು ಸಹಿ ಮಾಡಿರುವ ಹಾಳೆಯು ಎಷ್ಟು ಮುಖ ಬೆಲೆಯ ಛಾಪಾ ಕಾಗದದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ.

5. ಡಿಸೆಂಬರ್ 2016 ರ ಕೊನೆಯ ವಾರದಲ್ಲಿ ನಾನು ಸಹಿ ಮಾಡಿರುವ ವೀಲು ನಾಮೆಯ ತಿದ್ದುಪಡಿ ಪತ್ರವು ಎಷ್ಟು ಪುಟಗಳಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ವೀಲು ನಾಮೆಯ ತಿದ್ದುಪಡಿ ಪತ್ರವನ್ನು ಎಲ್ಲಿ ಬರೆಳಚ್ಚು ಮಾಡಿರುತ್ತಾರೆ ಎಂದು ನಾನು ಜಯಮ್ಮ ರವರ ಬಳಿ ಕೇಳಿರುವುದಿಲ್ಲ. ಸದರಿ ವೀಲು ನಾಮೆಯ ತಿದ್ದುಪಡಿ ಪತ್ರವನ್ನು ಜಯಮ್ಮ ರವರು ಯಾರ ಬಳಿ ಬರೆಸಿರುತ್ತಾರೆ ಎಂದು ನಾನು ಕೇಳಿರುವುದಿಲ್ಲ. ಸದರಿ ವೀಲು ನಾಮೆಯ

ತಿದ್ದುಪಡಿ ಪತ್ರವನ್ನು ಕಂಪ್ಯೂಟರ್ ನಲ್ಲಿ ಪ್ರಿಂಟ್ ತೆಗೆದಿರಬೇಕು ಸರಿಯಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವೀಲು ನಾಮೆಯ ತಿದ್ದುಪಡಿ ಪತ್ರದ 2 ನೇ ಪುಟದಲ್ಲಿ ನಾನು ಸಹಿ ಮಾಡಿರುತ್ತೇನೆ. ಸದರಿ ತಿದ್ದುಪಡಿ ಪತ್ರದಲ್ಲಿ ಸ್ವತ್ತುಗಳ ಬಗ್ಗೆ ಯಾವುದೇ ಅನುಸೂಚಿಯನ್ನು ಕಾಣಿಸಿರುವುದಿಲ್ಲ. ನಾನು ಸದರಿ ವೀಲು ನಾಮೆಗೆ 1 ನೇ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನಂತರ ಗುರುವಪ್ಪ ಸಹಿ ಮಾಡಿರುತ್ತಾರೆ. 8 ವರ್ಷಗಳ ಹಿಂದೆ ಡಿಸೆಂಬರ್ 3 ಅಥವಾ 4 ತಾರೀಖಿನದಂದು ವೀಲು ನಾಮೆಯ ತಿದ್ದುಪಡಿ ಪತ್ರಕ್ಕೆ ಸಹಿ ಹಾಕಲು ನನ್ನನ್ನು ಬರಲು ಹೇಳಿರುತ್ತಾರೆ. ಜಯಮ್ಮ ರವರ ಪತಿಯ ಹೆಸರು ನನಗೆ ಗೊತ್ತಿಲ್ಲ. ಜಯಮ್ಮ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಜಯಮ್ಮ ರವರಿಗೆ ಒಟ್ಟು 3 ಜನ ಮಕ್ಕಳಿರುತ್ತಾರೆ. ಜಯಮ್ಮ ರವರ ಮಕ್ಕಳ ಹೆಸರು ನನಗೆ ನೆನಪಿಲ್ಲ. ಜಯಮ್ಮ ರವರ ಮಕ್ಕಳು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 01.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಪಾಟೀ ಸವಾಲು ಶ್ರೀ ಎನ್.ಎಸ್.ಜೆ. ವಕೀಲರಿಂದ ಪ್ರತಿವಾದಿ ಪರವಾಗಿ**

6. ನಿ.ಪಿ.8 ದಾಖಲಾತಿಯು ಎಲ್ಲಿ ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.8 ದಾಖಲಾತಿಯನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.8 ದಾಖಲೆಯಲ್ಲಿ ದಿನಾಂಕವನ್ನು ಅಂಕಿಯಲ್ಲಿ ಬರೆದಿರುತ್ತಾರೋ ಅಕ್ಷರದಲ್ಲಿ ಬರೆದಿರುತ್ತಾರೋ ನನಗೆ ಗೊತ್ತಿಲ್ಲ. ನಿ.ಪಿ.7 ದಾಖಲಾತಿಯಲ್ಲಿ ಮೊದಲನೇ ಸ್ವತ್ತು ಯಾವುದಲ್ಲಿ ಕಾಣಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.7 ದಾಖಲಾತಿಯನ್ನು ಆದಿತ್ಯ ವಕೀಲರ ಮನೆಯ ಪಕ್ಕದಲ್ಲಿ ಇರುವ ಆಸ್ತಿಗೆ ಸಂಬಂಧಪಟ್ಟಂತೆ ಬರೆದಿರುತ್ತಾರೆ. ಸದರಿ ಆಸ್ತಿಯ ವಿವರಗಳು ನನಗೆ ಗೊತ್ತಿಲ್ಲ. ಸದರಿ ನಿ.ಪಿ.7 ದಾಖಲಾತಿಯಲ್ಲಿ ನಮೂದು ಮಾಡಿರುವ ಮನೆಯು ಎಷ್ಟು ವಿಸ್ತೀರ್ಣದಲ್ಲಿ ಮತ್ತು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 2 ನೇ ಬಾರಿ ನೀವು ಆದಿತ್ಯ ವಕೀಲ ಕಚೇರಿಗೆ ಯಾವ ಕಾರಣಕ್ಕಾಗಿ ಹೋಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಜಯಮ್ಮ ರವರು ಅವರ ಮಗಳ ಹೆಸರಿಗೆ ವೀಲು ನಾಮೆಯನ್ನು ಮಾಡಿದ್ದು ಸದರಿ ವೀಲು ನಾಮೆಯನ್ನು ತಿದ್ದುಪಡಿ ಮಾಡುವ ಉದ್ದೇಶದಿಂದ ನಾನು 2 ನೇ ಬಾರಿಗೆ ಆದಿತ್ಯ ವಕೀಲರ ಕಚೇರಿಗೆ ಹೋಗಿರುತ್ತೇನೆ. ವೀಲು ನಾಮೆಯಲ್ಲಿ ಏನು ತಿದ್ದುಪಡಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.8 ದಾಖಲಾತಿಯಲ್ಲಿ ಎಷ್ಟು ಸ್ವತ್ತುಗಳನ್ನು ಕಾಣಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿ.ಪಿ.8 ದಾಖಲೆಯು ಕೈಬರಹದಲ್ಲಿ ಇರುತ್ತದೋ ಅಥವಾ ಬೆರಳಚ್ಚಾಗಿರುತ್ತದೋ ಎಂದು ನನಗೆ ನೆನಪಿಲ್ಲ. ನಿ.ಪಿ.8 ದಾಖಲಾತಿಯನ್ನು ಎಷ್ಟು ಮುಖ ಬೆಲೆಯ ಛಾಪಾ ಕಾಗದಲ್ಲಿ ಮಾಡಿರುತ್ತದೆ ಎಂದು ನನಗೆ ನೆನಪಿಲ್ಲ. ನಿ.ಪಿ.8 ದಾಖಲಾತಿಯನ್ನು ತಯಾರು ಮಾಡಿರುವ ಛಾಪಾ ಕಾಗದವು

ಯಾರ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಮತ್ತು ಯಾರು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವೀಲು ನಾಮೆಯನ್ನು ಎಷ್ಟು ರೂಪಾಯಿಯ ಛಾಪಾ ಕಾಗದಲ್ಲಿ ಮಾಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ವೀಲು ನಾಮೆಯನ್ನು ತಯಾರು ಮಾಡಲು ಬಳಸಿರು ಛಾಪಾ ಕಾಗದವನ್ನು ಯಾರು ಎಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.7 ಮತ್ತು 8 ದಾಖಲಾತಿಯನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಜಯಮ್ಮ ರವರು ಯಾವುದೇ ವೀಲು ನಾಮೆಯನ್ನು ಅಥವಾ ವೀಲು ನಾಮೆಯ ತಿದ್ದುಪಡಿಯನ್ನು ಮಾಡದೇ ಇದ್ದರು ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಜೊತೆ ಶಾಮೀಲ್ ಆಗಿ ನಿ.ಪಿ.7 ಮತ್ತು 8 ದಾಖಲಾತಿಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ